- -

ಓ.ಎಸ್. ನಂ. : 12-2020

ಪಿ.ಡಬ್ಲ್ಯೂ : 2

ಸಾಕ್ಷಿಯ ಹೆಸರುಃ ನಮಿತಾ ಆನಂದು ಉಳಗೇಕರ

ದಿಃ 04-01-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೊಧಿಸಲಾಯಿತು.

**ಪಾಟೀ ಸವಾಲುಃ ಶ್ರೀ ಆರ್ ಎಸ್ ಎಚ್ (ಜಿ) ವಕೀಲರಿಂದಃ ಪ್ರತಿವಾದಿ ಪರವಾಗಿಃ**

ನನ್ನ ಮದುವೆ 11 ವರ್ಷಗಳ ಹಿಂದೆ ಆಗಿದ್ದು ಇರುತ್ತದೆ. ಆ ಸಮಯದಿಂದ ನಾನು ಕೋಡಿಬಾಗ ಕಾರವಾರದಲ್ಲಿ ವಾಸವಾಗಿರುತ್ತೇನೆ. ಕೋಡಿಬಾಗದಿಂದ ಕೊಳಗೆ ಗ್ರಾಮ ಸುಮಾರು 7 ಕಿ.ಮೀಟರ್ ಇರುತ್ತದೆ. ನಾನು ಖಾಯಂ ಕೋಡಿಬಾಗದಲ್ಲಿ ವಾಸವಾಗಿರುತ್ತೇನೆ. ಕೋಡಿಬಾಗದಲ್ಲಿ ನಮಗೆ ಸೇರಿದ

ಓ.ಎಸ್. ನಂ. : 12-2020

ಪಿ.ಡಬ್ಲ್ಯೂ : 2

ಜಮೀನು ಮನೆ ಇರುತ್ತದೆ. ತೊರ್ಲೆ ಬಾಗದ ಅಂಗಡಿ ದಾವಾ ಸ್ವತ್ತಿನಿಂದ ಸುಮಾರು 1 ವರೆ – 2 ಕಿ. ಮೀ ದೂರು ಇರುತ್ತದೆ. ಮೂಡಗೇರಿ ಗ್ರಾಮವು ಕೊಳಗೆ ಗ್ರಾಮದಿಂದ 2 ಕಿ. ಮೀ. ದೂರದಲ್ಲಿ ಇರುತ್ತದೆ. ದಾವಾ ಆಸ್ತಿಯಿಂದ ಹಳಗಾವು 3 ಕಿ.ಮೀಟರ್ ದೂರದಲ್ಲಿ ಇರುತ್ತದೆ. ವಾದಿ ನಂ.1, 2 ಮತ್ತು 4 ರವರು ತೊರ್ಲೆಬಾಗದ ಅಂಗಡಿಯಲ್ಲಿ ವಾಸವಾಗಿರುತ್ತಾರೆ. 3 ನೇ ವಾದಿ ಮೂಡಗೇರಿಯಲ್ಲಿ ವಾಸವಾಗಿರುತ್ತಾಳೆ. 5 ನೇ ವಾದಿ ಹಳಗಾದಲ್ಲಿ ವಾಸವಾಗಿರುತ್ತಾರೆ, ವಾದಿ ನಂ.6 ರಿಂದ 8 ರವರು ಕೋಡಿಬಾಗ ಕಾರವಾರದಲ್ಲಿ ವಾಸವಾಗಿರುತ್ತಾರೆ. ತುಳಸಿ ಮತ್ತು ಅಶ್ವಿನಿ ಮದುವೆ ಮಾಡಿಕೊಂಡು ಗಂಡನ ಮನೆಯಲ್ಲಿ ವಾಸವಾಗಿರುತ್ತಾರೆ. ಛಾಯಾ ರವರ ಮದುವೆಯಾಗಿದ್ದು ಇರುವುದಿಲ್ಲ ಮನೆಯಲ್ಲಿ ಇರುತ್ತಾರೆ. ದೇವಕಿ ನನ್ನ ಅಜ್ಜಿ ಅಂದರೆ 1 ರಿಂದ 5 ನೇ ವಾದಿಯರ ತಾಯಿ ತೊರ್ಲೆಬಾಗದಲ್ಲಿ ವಾಸವಾಗಿದ್ದು ಅಲ್ಲಿ ಆಸ್ತಿ ಇರುತ್ತದೆ.

2) ದಾವಾ ಆಸ್ತಿಯಲ್ಲಿ ನಮೂದಿಸಿರುವ ಸರ್ವೆ ನಂಬರ್ ನ ಆಸ್ತಿಗಳು ಯಾವ್ಯಾವ ಗ್ರಾಮದಲ್ಲಿ ಎಲ್ಲೆಲ್ಲಿ ಇರುತ್ತವೆ ಅಂತಾ ನನಗೆ ಹೇಳಲು ಆಗುವುದಿಲ್ಲ. ದಾವಾ ಆಸ್ತಿಗಳು ತೊರ್ಲೆ ಬಾಗದಲ್ಲಿ ಇರುವುದು ಮಾತ್ರ ಗೊತ್ತು. ದಾವಾ ಆಸ್ತಿಗಳು ಮೂಲತಃ ದೇವಕಿ ಯವರಿಗೆ ಸೇರಿದ್ದು ಇರುತ್ತದೆ. ದಾವಾ ಆಸ್ತಿಗಳ ಪಹಣಿ ಪತ್ರಿಕೆಯಲ್ಲಿ ಯಾರ ಹೆಸರು ಇರುತ್ತವೆ ಅಂತಾ ನನಗೆ ಗೊತ್ತಿಲ್ಲ. ದಾವಾ ಆಸ್ತಿಗಳು ಯಾರಿಂದ ಹೇಗೆ ಬಂತು ಅಂತಾ ಹೇಳಲು ಆಗುವುದಿಲ್ಲ. ಪುಂಡಲೀಕರವರು ರೈತ ನಾತೆಯಿಂದ ದಾವಾ ಆಸ್ತಿಯನ್ನು ಉಳುಮೆ ಮಾಡುತ್ತಿದ್ದರು ಎಂದರೆ ಸರಿ. ಪುಂಡಲೀಕರವರಿಗೆ ಭೂನ್ಯಾಯಮಂಡಳಿಯಿಂದ ಆದೇಶವಾಗಿ ಸದರಿಯವರಿಗೆ ಜಮೀನನ್ನು ಮಂಜೂರು ಮಾಡಿರುತ್ತಾರೆ ಎಂದರೆ ಸರಿಯಲ್ಲ. ಪುಂಡಲೀಕರವರಿಗೆ ದಾವಾ ಆಸ್ತಿಗಳು ಹೇಗೆ ಬಂದವು ಅಂತಾ ಗೊತ್ತಿಲ್ಲ. ಪುಂಡಲೀಕರವರು ಯಾವ ಸಾಲಿನಲ್ಲಿ ಮರಣ ಹೊಂದಿರುತ್ತಾರೆ ಅಂತಾ ಗೊತ್ತಿಲ್ಲ. ಪುಂಡಲೀಕರವರು ಮರಣದ ನಂತರ ದಾವಾ ಆಸ್ತಿಗಳು ಯಾರ್ಯಾರ ಹೆಸರಿನಲ್ಲಿ ಬಂದಿರುತ್ತವೆ ಏಕೆ ಬಂದಿರುತ್ತವೆ ಎನ್ನುವುದು ಗೊತ್ತಿಲ್ಲ. ಪುಂಡಲೀಕರವರ ಹೆಂಡತಿ ಹೆಸರು ದೇವಕಿ. ಪುಂಡಲೀಕರವರಿಗೆ 8 ಜನ ಮಕ್ಕಳು. ಪುಂಡಲೀಕರವರು ತೀರಿಕೊಳ್ಳುವ ಪೂರ್ವದಲ್ಲಿ ಎರಡು ಮಕ್ಕಳು ತೀರಿಕೊಂಡಿದ್ದರು ಎಂದರೆ ನನಗೆ ಗೊತ್ತಿಲ್ಲ. ಕೊಯರ್ ಮತ್ತು ಮಿಲನ್ ರವರು ಪುಂಡಲೀಕರವರು ತೀರಿಕೊಳ್ಳುವ ಪೂರ್ವದಲ್ಲಿ ಮರಣ ಹೊಂದಿದ್ದರು ಎಂದರೆ ನನಗೆ ಗೊತ್ತಿಲ್ಲ. ಪುಂಡಲೀಕರವರು ತೀರಿಕೊಂಡ ನಂತರ ಅವರ ವಾರಸುದಾರರ ಹೆಸರುಗಳು ಪಹಣಿ ಪತ್ರಿಕೆಯಲ್ಲಿ ನಮೂದಿಸಿರುತ್ತಾರೆ ಎಂದರೆ ನನಗೆ ಗೊತ್ತಿಲ್ಲ, ಪುಂಡಲೀಕರವರು ದಿಃ17-10-1998 ರಂದು ತೀರಿಕೊಂಡಿದ್ದಾರೆ ಎಂದರೆ ನನಗೆ ಗೊತ್ತಿಲ್ಲ, ಪುಂಡಲೀಕರವರು ತೀರಿಕೊಂಡ ನಂತರ ಅವರ ಹೆಂಡತಿ ಮತ್ತು ಅವರ 5 ಜನ ಮಕ್ಕಳ ಹೆಸರಿನಲ್ಲಿ ಪಹಣಿ ಪತ್ರಿಕೆಯನ್ನು ನಮೂದಿಸಿದ್ದಾರೆ ಎಂದರೆ ನನಗೆ ಗೊತ್ತಿಲ್ಲ. ಪುಂಡಲೀಕರವರು ಮೃತ

ಓ.ಎಸ್. ನಂ. : 12-2020

ಪಿ.ಡಬ್ಲ್ಯೂ : 2

ಹೊಂದಿದ ನಂತರ ಪಹಣಿ ಪತ್ರಿಕೆಯಲ್ಲಿ ದೇವಕಿ, ದಿಗಂಬರ, ಪ್ರಭಾಕರ, ಚಂದ್ರಕಾಂತ, ಬೇಬಿ ಮತ್ತು ಲಲಿತಾ ಇವರ ಹೆಸರಿನಲ್ಲಿ ಇರುತ್ತವೆ ಎಂದರೆ ಸರಿ. ಕೊಯರ್ ಮತ್ತು ಮಿಲನ್ ರವರು ಪುಂಡಲೀಕರವರು ತೀರಿಕೊಳ್ಳುವ ಪೂರ್ವದಲ್ಲಿ ಮರಣ ಹೊಂದಿರುವುದರಿಂದ ಅವರ ಹೆಸರು ನಮೂದಿಸಿಲ್ಲ ಎಂದರೆ ನನಗೆ ಗೊತ್ತಿಲ್ಲ. ಪುಂಡಲೀಕರವರ ಮಕ್ಕಳಿಗೆ ಮದುವೆಯಾಗಿತ್ತಾ ಎನ್ನುವ ಪ್ರಶ್ನೆಗೆ ಸಾಕ್ಷಿಯು ಇಲ್ಲ ಅಂತಾ ನುಡಿಯುತ್ತಾರೆ. ಪುಂಡಲೀಕರವರು ಮೃತಪಟ್ಟ ನಂತರ ವಾರಸಾ ನಾತೆಯಿಂದ ಆದ ಮ್ಯುಟೇಶನ್ ನ್ನು ಪ್ರಶ್ನೆ ಮಾಡಿದ್ದು ಇರುವುದಿಲ್ಲ. ನನ್ನ ಅಜ್ಜಿ ಮತ್ತು ನಾವು ಕಚೇರಿಗೆ ಅರ್ಜಿ ಸಲ್ಲಿಸಿ ನಮ್ಮ ಹೆಸರನ್ನು ನಮೂದಿಸಲು ಕೋರಿಕೊಂಡಿದ್ದು ಇರುವುದಿಲ್ಲ. ನನ್ನ ತಾಯಿ 2013 ರಲ್ಲಿ ತೀರಿಕೊಂಡಿರುತ್ತಾರೆ.

**(ಮುಂದುವರಿದ ಪಾಟೀ ಸವಾಲಿಗೆ ಸಮಯಾವಕಾಶ ಕೇಳಿದ್ದು, ಸಮಯಾವಕಾಶ ನೀಡಲಾಯಿತು)**

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿ ಹೇಳಿಕೆಯನ್ನು ನನ್ನ ಉಕ್ತಲೇಖನದ ಮೇರೆಗೆ ಬೆರಳಚ್ಚು ಮಾಡಿಸಲಾಯಿತು)

ಓ.ಹೇ.ಕೇ. ಸರಿ ಇದೆ

ಹೆಚ್ಚುವರಿ ಹಿರಿಯ ಸಿವಿಲ್ ನ್ಯಾಯಾಧೀಶರು
ಕಾರವಾರ.